# ಮಾಸ ಭವಿಷ್ಯ

-ಅರುಣ ಪಿ. ಭಟ್



**ಮೇಷ:** ಉದ್ಯೋಗಿಗಳಿಗೆ ಕೆಲಸದ ಸ್ಥಳದಲ್ಲಿ ಉತ್ತಮ ಸ್ಥಾನ. ತಿಂಗಳ ಆರಂಭದಿಂದ ಮಧ್ಯಭಾಗದವರೆಗೆ ಸ್ವಲ್ಪ ಸಮಸ್ಯೆಯನ್ನು ಅನುಭವಿಸುತ್ತೀರಿ. ಇದರಿಂದ ನಿಮ್ಮ ಮನಸ್ಸಿಗೆ ಹಾನಿಯಾಗುತ್ತದೆ. ವ್ಯಾಪಾರದಲ್ಲಿ ಹಾನಿ. ಭೂ ವ್ಯವಹಾರಕ್ಕೆ ಉತ್ತಮ. ವಿದ್ಯಾರ್ಥಿಗಳಿಗೆ ಉತ್ತಮ ಸಮಯ. ಶುಭ: 12, 16, 21. ಅಶುಭ: 15, 19, 23.

**ವೃಷಭ:** ಬಹುದಿನಗಳ ಗೃಹಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಉತ್ತಮ ಯಶ. ಸರ್ಕಾರಿ ನೌಕರರಿಗೆ ಪದೋನ್ನತಿ. ಇಚ್ಛಿಸಿದ ಸ್ಥಳಕ್ಕೆ ಬದಲಾವಣೆ. ಆಪ್ತರಿಂದ ಸನ್ಮಾನ. ಹಳೆಯ ಸ್ನೇಹಿತರಿಗೆ ಸಾಲ ನೀಡಿದರೆ ವಾಪಸ್ ಬರುವುದು ಕಷ್ಟ. ಶುಭ: 14, 19, 24. ಅಶುಭ: 13, 22, 26.





**ಮಿಥುನ:** ಈ ತಿಂಗಳ ಮೊದಲ ಅರ್ಧದಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಳ್ಳಿ. ಜಡತ್ವ ಕರಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ. ಮಕ್ಕಳ ವರ್ತನೆಗಳಿಂದ ಮನಸ್ಸಿಗೆ ಬೇಸರ. ಉದ್ಯೋಗ ಸ್ಥಳದಲ್ಲಿ ಗೌರವ, ವರ್ಚಸ್ಸು ಹೆಚ್ಚಳ ಸಾಧ್ಯತೆ. ಶುಭ: 18, 21, 24. ಅಶುಭ: 16, 22, 24.

**ಕರ್ಕ:** ತಿಂಗಳ ಪ್ರಾರಂಭದಲ್ಲಿ ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯವಿಕ್ರಯದಲ್ಲಿ ವಂಚನೆ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶಾರೀರಿಕ ಹಾಗೂ ಮಾನಸಿಕ ಉತ್ಸಾಹ ವೃದ್ಧಿ. ಶುಭ: 16, 18, 23. ಅಶುಭ: 15, 22, 27.





**ಸಿಂಹ:** ಆದಷ್ಟು ಕೆಲಸ ಕಾರ್ಯಗಳ ಬಗ್ಗೆ ಸೂಕ್ತ ಮುತುವರ್ಜಿ ವಹಿಸಿ. ಹೆಚ್ಚಿನ ಕೆಲಸ ಹಾಗೂ ಹೊಸ ಆದಾಯ ಮಾರ್ಗ ಕಂಡುಬರಲಿದೆ. ನಿಮ್ಮ ವರ್ಚಸ್ಸು ಹಾಳು ಮಾಡಲು ವಿರೋಧಿ ಪಾಳಯದವರಿಂದ ಪ್ರಯತ್ನ ನಡೆಯಲಿದೆ. ಹಾಗಾಗಿ, ಎಚ್ಚರಿಕೆ ಅಗತ್ಯ. ಶುಭ: 14, 22, 29. ಅಶುಭ: 16, 19, 29.

**ಕನ್ಯಾ:** ವೈಯಕ್ತಿಕ–ವೃತ್ತಿಪರ ಬದುಕಿನಲ್ಲಿ ಲಾಭ, ಮಹತ್ತರವಾದ ಪ್ರಗತಿ. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ. ಸಿನಿಮಾ, ವೈದ್ಯಕೀಯ, ಕಲೆ ಈ ರೀತಿಯ ವೃತ್ತಿಯಲ್ಲಿ ಇರುವವರಿಗೆ ಅತ್ಯುತ್ತಮವಾದ ಲಾಭ ಇದೆ. ಆರೋಗ್ಯವು ಚೆನ್ನಾಗಿರುತ್ತದೆ. ಶುಭ: 14, 18, 22. ಅಶುಭ: 17, 23, 29.





**ತುಲಾ:** ಶೈಕ್ಷಣಿಕ ರಂಗದಲ್ಲಿರುವವರಿಗೆ ತಿಂಗಳ ಆರಂಭದಲ್ಲಿ ಅದ್ಭುತವಾದ ಯಶಸ್ಸು. ಕ್ರೀಡೆ, ಸಿನಿಮಾ, ಸಂಗೀತ ಕ್ಷೇತ್ರದಲ್ಲಿರುವವರಿಗೆ ಗೌರವದ ಸ್ಥಾನಮಾನ. ಆದಾಯ ಮೂಲಗಳಿಂದ ಲಾಭ ಸಾಧ್ಯತೆ. ಉದ್ಯೋಗಸ್ಥರು, ವ್ಯಾಪಾರಸ್ಥರ ಬೆಳವಣಿಗೆಗೆ ಅವಕಾಶವಿದೆ. ಶುಭ: 10, 16, 23. ಅಶುಭ: 11, 18, 27.

**ವೃಶ್ಚಿಕ:** ನಿಮ್ಮ ಕಾರ್ಯಗಳನ್ನು ಈ ಹಿಂದೆಂದಿಗಿಂತಲೂ ವೇಗವಾಗಿ ಮಾಡಲಿದ್ದೀರಿ. ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಕೆಲಸ ಕಾರ್ಯ ಪೂರ್ಣ ಮಾಡಲು ಹೆಚ್ಚು ಹಣ ಖರ್ಚು. ತಿಂಗಳ ಮಧ್ಯಭಾಗದಿಂದ ಆರೋಗ್ಯ ಉತ್ತಮ. ಉದ್ಯೋಗದ ಕಡೆಗೆ ನಿಮ್ಮ ಗಮನ ಹೆಚ್ಚಾಗುತ್ತದೆ. ಶುಭ: 14, 16, 22. ಅಶುಭ: 7, 11, 26.





**ಧನು:** ವೃತ್ತಿಪರ ಜೀವನದಲ್ಲಿ ಸ್ವಚ್ಛ ವ್ಯಕ್ತಿತ್ವ ಎಂಬ ಹೆಸರು ಪಡೆಯಲಿದ್ದೀರಿ. ತಂದೆಯ ಜತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗುತ್ತದೆ. ಮನೆಯಲ್ಲಿ ಸಂತೋಷವಾದ ವಾತಾವರಣ. ಸಂಭವನೀಯ ಅಪಾಯಗಳಿಂದ ತಪ್ಪಿಸಿಕೊಳ್ಳಲು ನಿಮ್ಮ ಪಾಲಿಗೆ ದೈವ ಬಲವಿದೆ. ಶುಭ: 9, 14, 25. ಅಶುಭ: 17, 23, 28.

**ಮಕರ:** ಸಂತೋಷವಾಗಿ ಇರುತ್ತೀರಿ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಉತ್ತಮ ಲಾಭ. ವಿದ್ಯಾರ್ಥಿಗಳಿಗೆ ಯಶಸ್ಸು. ನಿಮ್ಮ ಮಗ ಅಥವಾ ಮಗಳ ಮದುವೆ ವಿಚಾರವನ್ನು ಅಂತಿಮಗೊಳಿಸುವ ಅವಕಾಶ ಇದೆ. ತಿಂಗಳ ಅಂತ್ಯಕ್ಕೆ ಆರೋಗ್ಯ ಸುಧಾರಣೆ. ಶುಭ.: 11, 14, 25. ಅಶುಭ: 15, 26, 29.





**ಕುಂಭ:** ತಿಂಗಳ ಶುರುವಿನಿಂದಲೇ ಉದ್ಯೋಗ ಕ್ಷೇತ್ರದಲ್ಲಿ ಅದ್ಭುತವಾದ ಸಾಧನೆ ಮಾಡುವ ಅವಕಾಶಗಳಿವೆ. ಪೋಷಕರಿಗೆ ಹೆಚ್ಚಿನ ಗೌರವ ನೀಡುತ್ತೀರಿ. ಸಾಮಾಜಿಕವಾಗಿ ಗೌರವ, ಮನ್ನಣೆ. ಮಕ್ಕಳ ಪ್ರಗತಿಯಿಂದ ಸಮಾಧಾನ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನಿರೀಕ್ಷಿತವಾದ ಯಶಸ್ಸು. ಶುಭ: 12, 20, 28. ಅಶುಭ: 10, 18, 27.

**ಮೀನ:** ಸಂಸ್ಥೆಯೊಂದರ ಜತೆ ಮಹತ್ತರವಾದ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಮನೆ ಹಾಗೂ ಕುಟುಂಬದ ಬಗ್ಗೆ ಹೆಚ್ಚು ಯೋಚನೆ ಮಾಡಲಿದ್ದೀರಿ. ಶ್ವಾಸಕೋಶ ಸಮಸ್ಯೆ ಎದುರಾಗಬಹುದು. ವಿದ್ಯಾರ್ಥಿಗಳಿಗೆ ಪ್ರಗತಿ. ಆದಾಯದಲ್ಲಿ ಹೆಚ್ಚಳ ಆಗುತ್ತದೆ. ಶುಭ: 8, 16, 22. ಅಶುಭ: 12, 24, 29.

